**ಎಂ.ವಿ.ಸಿ. ನಂಃ1258/2023 C/W.1256/23, P.W.-1**

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ದಿನಾಂಕಃ 07.02.2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಃ** ಅರ್ಜಿದಾರರ ಪರ **ವಕೀಲರಿಂದಃ**

ನಾನು ಎಮ್ ವಿ ಸಿ ನಂ.1258/23 ರಲ್ಲಿನ ಅರ್ಜಿದಾರನಾಗಿದ್ದು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಾಕ್ಯವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ.

ನಾನು ಪ್ರ.ವ.ವರದಿ, ದೂರು, ಕಲಂ 133 ಮೋಟಾರು ವಾಹನ ಖಾಯಿದೆಯಡಿ ನೀಡಿದ ನೋಟೀಸ್, 1 ನೇ ಎದುರುದಾರರು ನೋಟೀಸಿಗೆ ನೀಡಿರುವ ಉತ್ತರ, ಕರಡು ನಕಾಶೆ, ಐ ಎಮ್ ವಿ ವರದಿ, ಚಾರ್ಜ್ ಶೀಟ್ ನ ಯಥಾಪ್ರತಿಗಳು, ಡಿಸ್ಚಾರ್ಜ್ ಸಮ್ಮರಿ, disability certificate, ಔಷದ ಚೀಟಿ, ಮೆಡಿಕಲ್ ಬಿಲ್ಲುಗಳು, ಔಷದ ಚೀಟಿಗಳು, 4 ಎಕ್ಸರೇ ಫಿಲಂಗಳು, ಮೆಡಿಕಲ್ ಸರ್ಟಿಫಿಕೇಟ್‌ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-15 ಎಂದು ಗುರುತಿಸಲಾಯಿತು.

(ನಿಪಿ-10 ಮತ್ತು 15 ದಾಖಲೆಗಳನ್ನು ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನಿಸಲಾಗಿದೆ.)

ಆದ್ದರಿಂದ ನಾನು ಕೋರಿರುವಂತೆ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲು ಃ

ಎದುರುದಾರರ ಪರ ವಕೀಲರು ಸಾಕ್ಷಿಯ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು, ನೀಡಲಾಗಿದೆ.

**ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸ.ಇದೆ**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು